**23**

# ಕ್ರಿಸ್ತನು ಯಾಕೆ ಬಂದನು

ಕ್ರಿಸ್ತನು ನಿಷೇದಾರ್ಥಕಗಳನ್ನು ಉಪಯೋಗಿಸಿ ಬಹಳ ಸಲ ಬೋಧಿಸಿದನು - ಅಂದರೆ ಸತ್ಯವಾಗಿರದೇ ಇರುವಂಥದ್ದನ್ನು ವಿವರಿಸಿದನು. ಜನರು ಗಲಿಬಿಲಿಗೊಳ್ಳುವದನ್ನು ತಪ್ಪಿಸಿಕೊಳ್ಳುವಂತೆ ಸುಳ್ಳು ಬೋಧನೆಗಳ ಬಗ್ಗೆ ಮತ್ತು ಅಭಿಪ್ರಾಯಗಳ ಬಗ್ಗೆ ತಿಳಿದು ಕೊಂಡಿರ ಬೇಕೆಂದು ನಂಬಿದ್ದನು. ಭೂಲೋಕಕ್ಕೆ ತನ್ನ ಬರುವದರ ಬಗ್ಗೆ ಯೇಸುವಿನ ಬೋಧನೆಗಳಲ್ಲಿ ನಾವು ಅಂಥ ಅನೇಕ ಹೇಳಿಕೆಗಳನ್ನು ಕಂಡು ಕೊಳ್ಳುತ್ತೇವೆ. ಈ "ನಿಷೇದಾರ್ಥಕಗಳು" ಆತನು ಯಾಕೆ ಬಂದನು ಎಂಬುದರ ಬಗ್ಗೆ ಸತ್ಯವನ್ನು ವಿವರಿಸಲು ಸಹಾಯ ಮಾಡುತ್ತವೆ.

## ಲೋಕಕ್ಕೆ ತೀರ್ಪು ಮಾಡುವದಕ್ಕಾಗಿ ಅಲ್ಲ, ಆದರೆ ರಕ್ಷಿಸಲು ಆತನು ಬಂದನು

"ದೇವರು ತನ್ನ ಕುಮಾರನ ಮುಖಾಂತರ ಲೋಕಕ್ಕೆ ರಕ್ಷಣೆಯಾಗಬೇಕೆಂದು ಆತನನ್ನು ಕಳುಹಿಸಿಕೊಟ್ಟನೇ ಹೊರತು ತೀರ್ಪು ಮಾಡುವದಕ್ಕಾಗಿ ಕಳುಹಿಸಲಿಲ್ಲ" ಎಂದು ಯೋಹಾನ 3:17ರಲ್ಲಿ ಯೇಸು ಹೇಳಿದನು. ಒಂದು ಸಂದರ್ಭದಲ್ಲಿ, ಯೇಸುವು ಯೆರೂಸಲೇಮಿನ ಕಡೆಗೆ ಪ್ರಯಾಣ ಮಾಡುತ್ತಿದ್ದುದರಿಂದ ಯೇಸುವನ್ನು ಸ್ವೀಕರಿಸದೇ ಇದ್ದ ಒಂದು ಸಮಾರ್ಯ ಗ್ರಾಮದ ಮೇಲೆ ಬೆಂಕಿ ಬೀಳುವಂತೆ ಮಾಡಬೇಕೆಂದು ಒಂದು ಸಂದರ್ಭದಲ್ಲಿ ಯಾಕೋಬ ಮತ್ತು ಯೋಹಾನ ಬಯಸಿದರು. "ಮನುಷ್ಯಕುಮಾರನು ಆತ್ಮಗಳನ್ನು ರಕ್ಷಿಸುವದಕ್ಕೇ ಬಂದನು, ನಾಶ ಮಾಡುವುದಕ್ಕೆ ಬರಲಿಲ್ಲ" (ಲೂಕ 9:56) ಎಂದು ಯೇಸು ಅವರನ್ನು ಗದರಿಸಿದನು.

ದೇವರ ಯೋಜನೆ ಮತ್ತು ಅಪೇಕ್ಷೆಯು ಜಗತ್ತಿನ ರಕ್ಷಣೆಗಾಗಿದೆಯೇ ಹೊರತು ನಾಶನಕ್ಕಾಗಿ ಅಲ್ಲ. ಪಾಪಿಯನ್ನು ಶಿಕ್ಷಿಸಲು ಆತನು ಕೂತೂಹಲವುಳ್ಳವನಾಗಿರುವದಿಲ್ಲ, "ಎಲ್ಲರೂ ಮಾನಸಾಂತರ ಪಡಬೇಕು" (2 ಪೇತ್ರ 3:9) ಎಂದು ಆತನು ಅಪೇಕ್ಷಿಸುತ್ತಾನೆ. ಮನುಷ್ಯನಲ್ಲಿ ತಪ್ಪುಗಳನ್ನು ಕಂಡುಕೊಳ್ಳಲು ಆಸಕ್ತನಾಗಿರುವ, ಅವನನ್ನು ಗಮನಿಸುತ್ತಿರುವ ಪೈಶಾಚಿಕ ಚಕ್ರಾಧಿಪತಿಯಂತೆ ಕೆಲವರು ದೇವರನ್ನು ಚಿತ್ರಿಸಿದ್ದಾರೆ; ಆದರೆ ಪರಿಶುದ್ಧ ಬರಹಗಳಲ್ಲಿ ಕೊಡಲ್ಪಟ್ಟ ಚಿತ್ರವದಾಗಿರುವದಿಲ್ಲ. ನಿನೆವೆಯನ್ನು ದೇವರು ನಾಶಮಾಡದಿದ್ದಾಗ ಯೋನನು ಸಂತುಷ್ಠನಾಗದಿದ್ದಾಗ ಆ ಭಾವನೆಯಿರುವುದಕ್ಕಾಗಿ ದೇವರು ಅವನನ್ನು ಗದರಿಸಿದನು. "ಇಂಥ ಗಿಡಕ್ಕಾಗಿ ನೀನು ಕನಿಕರ ಪಟ್ಟಿರುವಲ್ಲಿ ಎಡಗೈ ಬಲಗೈ ತಿಳಿಯದ ಒಂದು ಲಕ್ಷ ಇಪ್ಪತ್ತು ಸಾವಿರ ಜನರು ಬಹಳ ಪಶುಗಳೂ ಉಳ್ಳ ಆ ದೊಡ್ಡ ಪಟ್ಟಣವಾದ ನಿನೆವೆಗಾಗಿ ನಾನು ಕನಿಕರಪಡಬಾರದೋ ...?" (ಯೋನ 4:11) ಎಂದು ಆತನು ಹೇಳಿದನು. ಮನುಷ್ಯನು ರಕ್ಷಿಸಲ್ಪಡದೇ ಇರುವಾಗ ದೇವರು ದುಃಖಪಡುತ್ತಾನೆ. ಆತನ ಉದ್ದೇಶವು ರಕ್ಷಿಸುವುದಾಗಿದೆ.

ಯೇಸುವಿನ ಮೊದಲನೆಯ ಬರೋಣವು ರಕ್ಷಣೆಗಾಗಿತ್ತೇ ಹೊರತು ನ್ಯಾಯ ತೀರಿಸುವದಕ್ಕಾಗಿರಲಿಲ್ಲ.

## ಆತನು ಧರ್ಮಶಾಸ್ತ್ರವನ್ನು ಮತ್ತು ಪ್ರವಾದನೆಗಳನ್ನು ನಾಶ ಮಾಡುವದಕ್ಕೆ ಅಲ್ಲ, ಆದರೆ ನೆರವೇರಿಸುವದಕ್ಕೆ ಬಂದನು

"ಮೋಶೆಯ ಧರ್ಮ ಶಾಸ್ತ್ರವನ್ನಾಗಲಿ ಪ್ರವಾದಿಗಳ ವಚನಗಳನ್ನಾಗಲಿ ತೆಗೆದು ಹಾಕುವದಕ್ಕೆ ನಾನು ಬಂದೆನೆಂದು ನೆನಸಬೇಡಿರಿ. ತೆಗೆದು ಹಾಕುವದಕ್ಕೆ ಬಂದಿಲ್ಲ; ನೆರವೇರಿಸುವದಕ್ಕೆ ಬಂದಿದ್ದೇನೆ" (ಮತ್ತಾಯ 5:17) ಎಂದು ಯೇಸು ತನ್ನ ಅನುಯಾಯಿಗಳಿಗೆ ಹೇಳಿದನು. "ಧರ್ಮಶಾಸ್ತ್ರವೆಲ್ಲಾ ನೆರವೇರುವ ತನಕ ಅದರಲ್ಲಿ ಒಂದು ಕನಿಷ್ಠಾಕ್ಷರವಾದರೂ, ಕನಿಷ್ಠ ಬಿಂದುವಾದರೂ ಅಳಿದು ಹೋಗುವುದಿಲ್ಲ" (ಮತ್ತಾಯ 5:18) ಎಂದೂ ಹೇಳಿದನು. ಧರ್ಮಶಾಸ್ತ್ರದ ಪ್ರತಿಯೊಂದು ಭಾಗವೂ ನೆರವೇರುವವರೆಗೆ ಅದು ದಾಟಿಹೋಗುವದಿಲ್ಲ.

ಹಳೇ ಒಡಂಬಡಿಕೆಯು ಇನ್ನೂ ಅನ್ವಯವಾಗುತ್ತದೆಂದು ಹೇಳಿಕೊಳ್ಳಲು ಈ ವಾಕ್ಯವನ್ನು ಕೆಲವರು ಉಪಯೋಗಿಸಿರುವರು ಆದರೆ ಇದು ಅದಕ್ಕೆ ಪ್ರತಿಯಾದದ್ದನ್ನು ಬೋಧಿಸುತ್ತದೆ. ಯೇಸುವು ಧರ್ಮಶಾಸ್ತ್ರವನ್ನಾಗಲೀ ಪ್ರವಾದಿಗಳನ್ನಾಗಲೀ ನಾಶಮಾಡಲು ಬರಲಿಲ್ಲ ಆದರೆ ಅವುಗಳನ್ನು ನೆರವೇರಿಸಲು ಬಂದನು. ಆತನು ಅವುಗಳನ್ನು ನೆರವೇರಿಸಿದನು. ಆತನು ಪ್ರವಾದನೆಗಳನ್ನು ಪೂರೈಸಿದನು. ಧರ್ಮಶಾಸ್ತ್ರದ ಬೇಡಿಕೆಗಳಿಗೆ ಅನುಗುಣವಾಗಿ ಜೀವಿಸುವದರಿಂದ ಆವುಗಳ ಅಗತ್ಯತೆಗಳನ್ನು ನೆರವೇರಿಸಿದನು. ಇತರ ವಾಕ್ಯಗಳೂ ಸಹ ಮೋಶೆಯ ಧರ್ಮಶಾಸ್ತ್ರವು ನಿಶ್ಚಯವಾಗಿಯೂ ನೆರವೇರಿಸಲ್ಪಟ್ಟಿತು. ಇನ್ನು ಮುಂದೆ ಅದರ ಬಂಧನವಿಲ್ಲ ಎಂದು ಬೋಧಿಸುತ್ತದೆ (ಓದಿರಿ ಇಬ್ರಿಯ 10:9, 10; ಕೊಲೊಸ್ಸೆ 2:14; ಗಲಾತ್ಯ 3:24, 25).

ರೂಪಾಂತರವೂ ಅದೇ ಸತ್ಯವನ್ನು ಬೋಧಿಸುತ್ತದೆ. ಮೋಶೆ ಮತ್ತು ಎಲೀಯನ ಸಮ್ಮುಖದಲ್ಲಿ "ತನ ಮಾತನ್ನು ಕೇಳಿರಿ" ಎಂದು ಯೇಸುವನ್ನು ಕುರಿತು ದೇವರು ಹೇಳಿದನು (ಮತ್ತಾಯ 17:5). ಅಧಿಕಾರದ ವಾಣಿಯಾಗಿ ಮೋಶೆಯ ಮತ್ತು ಪ್ರವಾದಿಗಳ ಮಾತನ್ನು ಜನರು ಕೇಳುವ ಒಂದು ಸಮಯವಿತ್ತು. ಆದರೆ ಈಗ ಅಧಿಕೃತವಾಗಿ ಕ್ರಿಸ್ತನ ಮಾತನ್ನು ಕೇಳಿಸಿಕೊಳ್ಳಬೇಕು, ಮತ್ತು ಗುರುತಿಸಬೇಕು.

## ಆತನು ಸೇವೆಮಾಡಿಸಿಕೊಳ್ಳುವದಕ್ಕೆ ಅಲ್ಲ, ಆದರೆ ಸೇವೆ ಮಾಡುವದಕ್ಕೆ ಬಂದನು

"ಮನುಷ್ಯ ಕುಮಾರನು ಸೇವೆಮಾಡಿಸಿಕೊಳ್ಳುವದಕ್ಕೆ ಬರಲಿಲ್ಲ, ಸೇವೆ ಮಾಡುವದಕ್ಕೂ ಅನೇಕರ ಬಿಡುಗಡೆ ಕ್ರಯವಾಗಿ ತನ್ನ ಪ್ರಾಣವನ್ನು ಈಡಾಗಿ ಕೊಡುವದಕ್ಕೂ ಬಂದನು" (ಮತ್ತಾಯ 20:28) ಎಂದು ಯೇಸು ಹೇಳಿದನು. ಆತನಿಗೆ ಅಪೇಕ್ಷೆಯಿದ್ದರೆ, ಪರಲೋಕದ ಸೇವಕರುಗಳನ್ನೊಳಗೊಂಡು ಅನೇಕ ಸೇವಕರನ್ನು ಆತನು ಕರೆಯಬಹುದಿತ್ತು. ಪರಲೋಕದ ಮತ್ತು ಭೂಲೋಕದ ಎಲ್ಲಾ ಮೂಲಗಳು ಆತನ ಅಧೀನತೆಗೆ ಒಳಪಟ್ಟಿದ್ದವು. ಆದರೆ ಆತನು ಸೇವೆ ಮಾಡಿಸಿಕೊಳ್ಳುವದಕ್ಕೆ ಬರಲಿಲ್ಲ.

ನಿಜವಾದ ದೊಡ್ಡಸ್ತಿಕೆಯ ಮೇಲಿನ ಯೇಸುವಿನ ಪಾಠವನ್ನು ಜ್ಞಾಪಿಸಿಕೊಳ್ಳೋಣ, "ನಿಮ್ಮಲ್ಲಿ ಹೆಚ್ಚಿನವನು ನಿಮ್ಮ ಸೇವಕನಾಗಿರಬೇಕು" (ಮತ್ತಾಯ 23:11). ಈ ಪಾಠವನ್ನು

ಒತ್ತಿ ಹೇಳಲು ಹಾಗೂ ದೃಷ್ಟಾಂತವಾಗಿ ತೋರಿಸಲು ಆತನು ಕೈಪಾವುಡದಿಂದ, ದೀನತೆಯ ಕೈಪಾವುಡದಿಂದ ನಡುಕಟ್ಟಿಕೊಂಡು ಅಪೊಸ್ತಲರ ಪಾದಗಳನ್ನು ತೊಳೆದನು (ಯೋಹಾನ 13:5).

ಇಂದು ಲೋಕವು ಸೇವೆ ಮಾಡಿಸಿಕೊಳ್ಳುವುದೇ ತಮ್ಮ ಜೀವಿತದ ಮುಖ್ಯ ಗುರಿಯಾಗಿಟ್ಟು ಕೊಂಡಿರುವ ಜನರಿಂದ ತುಂಬಿಕೊಂಡಿರುವಂತೆ ಕಾಣುತ್ತದೆ. ಅವರು ಯಾವಾಗಲೂ ತಮ್ಮ ಕೆಳಗಿರುವವರಿಂದ, ಸರಕಾರದಿಂದ, ಸಭೆಯಿಂದ, ಸಾಧ್ಯವಾದ ಪ್ರತಿಯೊಂದು ಮೂಲದಿಂದ ಸ್ವೀಕರಿಸುವದನ್ನು ಅಪೇಕ್ಷಿಸುತ್ತಾರೆ. ಸಭೆಯ ಸದ್ಯಸ್ಯರೂ ಸಹ ತಮಗೆ ಸೇವೆಮಾಡಲಿಲ್ಲ ಎಂದು ದೂರಬಹುದು. ಸೇವೆಮಾಡಿಸಿ ಕೊಳ್ಳುವುದು ಜೀವನದಲ್ಲಿ ನಮ್ಮ ಚಿಂತೆಯಾಗಿರಬಾರದು. ನಮ್ಮ ಕೆಲಸವು ಸೇವೆಮಾಡುವುದು. ಯೇಸುವು ಪುನಃ ಬಂದು, ಕೈಪಾವುಡದಿಂದ ತನ್ನ ನಡುಕಟ್ಟಿಕೊಂಡು ನಮ್ಮ ಪಾದಗಳನ್ನು ತೊಳೆಯುವದಕ್ಕಾಗಿ ಕಾದು ಕೊಂಡಿರುವೆವೋ? ಆತನು ಒಂದು ಮಗುವನ್ನು ನಮ್ಮ ಮಧ್ಯದಲ್ಲಿ ನಿಲ್ಲಿಸಿ ನಿಜವಾದ ದೊಡ್ಡಸ್ತಿಕೆಯನ್ನು ನಮಗೆ ಕಲಿಸುವ ಅಗತ್ಯತೆಯಿದೆಯೋ? ಆತನು ಈಗಾಗಲೇ ಈ ಪಾಠಗಳನ್ನು ಕಲಿಸಿದ್ದಾನೆ; ಅವುಗಳಿಂದ ನಾವು ಕಲಿಯಬೇಕು.

## ಆತನು ನೀತಿವಂತರನ್ನು ಕರೆಯುವದಕ್ಕಾಗಿ ಅಲ್ಲ, ಆದರೆ ಪಾಪಿಗಳನ್ನು ಕರೆಯಲು ಬಂದನು

"ನನಗೆ ಯಜ್ಞವು ಬೇಡ, ಕರುಣೆಯೇ ಬೇಕು ಎಂಬ ಮಾತಿನ ಅರ್ಥವನ್ನು ಕಲಿತು ಕೊಳ್ಳಿರಿ. ನಾನು ನೀತಿವಂತರನ್ನು ಕರೆಯುವದಕ್ಕೆ ಬಂದವನಲ್ಲ, ಪಾಪಿಗಳನ್ನು ಕರೆಯುವದಕ್ಕೆ ಬಂದವನು" (ಮತ್ತಾಯ 9:13) ಎಂದು ಒಂದು ಸಂದರ್ಭದಲ್ಲಿ ಯೇಸು ತನ್ನ ಶಿಷ್ಯರನ್ನು ಆಹ್ವಾನಿಸಿದನು. ಪಾಪಿಗಳೊಂದಿಗೆ ಊಟಮಾಡುವನೆಂದು ಆತನೇ ಟೀಕಿಸಲ್ಪಟ್ಟಾಗ, ಆತನು ಉತ್ತರವನ್ನು ಕೊಟ್ಟನು: "ಆರೋಗ್ಯದಿಂದಿರುವವರಿಗೆ ವೈದ್ಯನು ಬೇಕಾಗಿಲ್ಲ, ಆರೋಗ್ಯವಿಲ್ಲದವರಿಗೆ ಬೇಕು" (ಮತ್ತಾಯ 9:12).

ಇತರರಿಂದ ಅಲಕ್ಷಿಸಲ್ಪಟ್ಟವರಿಗಾಗಿ ಯೇಸು ಗಮನ ಹರಿಸಿದನು. ಯೇಸುವು ನಿಜವಾದ ಮೆಸ್ಸೀಯನು ಎಂಬ ಭರವಸೆಯ ಅಗತ್ಯತೆ ಯೋಹಾನನಿಗಿದ್ದಾಗ, ಅವನ ಸಂದೇಶ ತಂದವರಿಗೆ ಅವನಿಗೆ ಹೇಗೆ ಹೇಳಬೇಕೆಂದು ನಿರ್ದೇಶಿಸಲ್ಪಟ್ಟಿತು: "ಕುರುಡರಿಗೆ ಕಣ್ಣು ಬರುತ್ತವೆ; ಕುಂಟರಿಗೆ ಕಾಲು ಬರುತ್ತವೆ; ಸತ್ತವರು ಕುಷ್ಠರೋಗಿಗಳು ಶುದ್ಧ ರಾಗುತ್ತಾರೆ; ಕಿವುಡರಿಗೆ ಕಿವಿ ಬರುತ್ತದೆ; ಸತ್ತವರು ಜೀವವನ್ನು ಹೊಂದುತ್ತಾರೆ; ಬಡವರಿಗೆ ಸುವಾರ್ತೆ ಸಾರಲ್ಪಡುತ್ತದೆ" (ಮತ್ತಾಯ 11:5). ಇದು ಯೋಹಾನನಿಗೆ ಯೇಸುವು ಕ್ರಿಸ್ತನು ಎಂಬುದನ್ನು ದೃಢಪಡಿಸುವುದು. ಯಾಕಂದರೆ ಯೇಸುವು ಮಾಡುತ್ತಿದ್ದ ಈ ಸಂಗತಿಗಳನ್ನೇ ಮೆಸ್ಸೀಯನು ಮಾಡುವನೆಂದು ಮುಂತಿಳಿಸಲ್ಪಟ್ಟಿತು (ಯೆಶಾಯ 61:1). ಹೌದು, ಇತರರಿಂದ ಅಲಕ್ಷಿಸಲ್ಪಟ್ಟವರ ಬಳಿಗೆ ಯೇಸುವು ಹೋದನು. ಕೆಟ್ಟ ಜನರಿಗೆ ಸಹಾಯ ಮಾಡುವ ಉದ್ದೇಶವಲ್ಲದೇ ಬೇರೆ ಯಾವ ಉದ್ದೇಶಕ್ಕಾಗಿಯೂ ಅಂಥ ಜನರೊಂದಿಗೆ ಸಹವಾಸದಲ್ಲಿರುವದನ್ನು ಈ ಉದಾಹರಣೆಯು ನ್ಯಾಯಬದ್ಧವಾದದ್ದಾನ್ನಾಗಿ ಮಾಡುವದಿಲ್ಲ.

## ಆತನು ಸಮಾಧಾನವನ್ನು ತರುವದಕ್ಕಾಗಿ ಅಲ್ಲ,
## ಆದರೆ ಖಡ್ಗವನ್ನು ಹಾಕುವದಕ್ಕಾಗಿ ಬಂದನು

ಯೇಸು ಪ್ರೀತಿ ಮತ್ತು ಸಮಾಧಾನವನ್ನು ಕುರಿತು ಮಾತನಾಡಿದರೂ ಆತನು, "ಭೂಲೋಕದ ಮೇಲೆ ಸಮಾಧಾನ ಹುಟ್ಟಿಸುವದಕ್ಕೆ ಬಂದೆನೆಂದು ನೆನಸ ಬೇಡಿರಿ; ಸಮಾಧಾನವನ್ನು ಹುಟ್ಟಿಸುವದಕ್ಕೆ ನಾನು ಬಂದಿಲ್ಲ, ಖಡ್ಗವನ್ನು ಹಾಕುವದಕ್ಕೆ ಬಂದೆನು" (ಮತ್ತಾಯ 10:34) ಎಂದು ಹೇಳಿದನು. ಧರ್ಮವು ಇತರ ಯಾವುದೇ ಬಂಧನದ ಮೇಲೆ ಇಡಲ್ಪಡಬೇಕು. ದುಷ್ಟತ್ವವು ಹೆಚ್ಚುತ್ತಿರುವವರೆಗೆ ವಿಭಾಗಗಳು ಇರತಕ್ಕದ್ದು. ಯಾವುದೇ ಶಾಂತಿಯನ್ನು ಕ್ರಯಕ್ಕಾಗಿ - ಸತ್ಯವನ್ನು ಬಲಿಕೊಟ್ಟು ಸಮಾಧಾನವನ್ನು ಕ್ರೈಸ್ತನು ಬಯಸುವದಿಲ್ಲ. ಸತ್ಯವು ವೈರತ್ವವನ್ನು ತರುವಾಗಲೂ ನಾವು ಅದನ್ನು ಆಯ್ದುಕೊಳ್ಳತಕ್ಕದ್ದು. ಸ್ನೇಹಿತರನ್ನು ಕಳೆದು ಕೊಳ್ಳಬೇಕಾಗಿದ್ದರೂ ಕ್ರಿಸ್ತನನ್ನು ಅನುಸರಿಸಲು ನಾವು ತೀರ್ಮಾನಿಸತಕ್ಕದ್ದು. ಈ ಅರ್ಥದಲ್ಲಿ ಯೇಸು ಖಡ್ಗವನ್ನು ತಂದನು:

> ಹೇಗೆಂದರೆ ಮಗನಿಗೂ ತಂದೆಗೂ, ಮಗಳಿಗೂ ತಾಯಿಗೂ, ಸೊಸೆಗೂ ಅತ್ತೆಗೂ ಭೇದ ಹುಟ್ಟಿಸುವದಕ್ಕೆ ಬಂದೆನು. ಹೀಗೆ ಒಬ್ಬ ಮನುಷ್ಯನಿಗೆ ಅವನ ಮನೆಯವರೇ ವೈರಿಗಳಾಗುವರು.
>
> "ತಂದೆಯ ಮೇಲಾಗಲಿ ತಾಯಿಯ ಮೇಲಾಗಲಿ ನನ್ನ ಮೇಲೆ ಇಡುವದಕ್ಕಿಂತ ಹೆಚ್ಚಾದ ಮಮತೆಯನ್ನಿಡುವವನು ನನಗೆ ಯೋಗ್ಯನಲ್ಲ; ಮಗನ ಮೇಲಾಗಲಿ ಮಗಳ ಮೇಲಾಗಲಿ ನನ್ನ ಮೇಲೆ ಇಡುವದಕ್ಕಿಂದ ಹೆಚ್ಚಾದ ಮಮತೆಯನ್ನಿಡುವವನು ನನಗೆ ಯೋಗ್ಯನಲ್ಲ" (ಮತ್ತಾಯ 10:35-37).

ದೈಹಿಕ ಕುಟುಂಬದ ಸದಸ್ಯರುಗಳ ಮತ್ತು ಕ್ರಿಸ್ತನ ಮಧ್ಯದಲ್ಲಿ ಆಯ್ಕೆ ಮಾಡುವುದು ಬಂದಾಗ, ನಾವು ಕ್ರಿಸ್ತನನ್ನು ಆಯ್ದುಕೊಳ್ಳತಕ್ಕದ್ದು. ಆತನನ್ನು ಪ್ರೀತಿಸುವದಕ್ಕಿಂತ ಹೆಚ್ಚಾಗಿ ನಾವು ತಂದೆಯನ್ನಾಗಲಿ, ತಾಯಿಯನ್ನಾಗಲಿ, ಸಹೋದರನನ್ನಾಗಲಿ ಸಹೋದರಿಯನ್ನಾಗಲಿ ಇಲ್ಲವೇ ಯಾವುದೇ ವ್ಯಕ್ತಿಯನ್ನಾಗಲಿ ಇಲ್ಲವೇ ಯಾವುದೇ ಸಂಗತಿಯನ್ನಾಗಲೀ ಪ್ರೀತಿಸಿದರೆ ನಾವು ಆತನ ಶಿಷ್ಯರಾಗಿರಲಾರೆವು. ಯೇಸುವು ಪ್ರಥಮ ಸ್ಥಾನವನ್ನು ಕೇಳುತ್ತಾನೆ. ಆತನು ಒಡೆಯನೇ ಆಗಿದ್ದರೆ ಆತನು ಎಲ್ಲವುಗಳ ಒಡೆಯನಾಗಿರಬೇಕು.

## ಮುಕ್ತಾಯ

ಕ್ರಿಸ್ತನು ಯಾಕೆ ಬಂದನು ಎಂಬುದರ ಕಾರಣಗಳನ್ನು ನೀವು ತಪ್ಪಾಗಿ ಅರ್ಥಮಾಡಿ ಕೊಂಡಿರುವಿರೋ? ನೀವು ಜೀವಿಸಬೇಕೆಂದು ದೇವರು ಅಪೇಕ್ಷಿಸುವ ರೀತಿಯಲ್ಲಿ ಜೀವಿಸುತ್ತಿರುವಿರೋ?

© 2009 Truth for Today